## ಬಲಿ ಪಾಡ್ಯಮಿ ಎಂದರೇನು ?

ಬಲಿಪಾಡ್ಯಮಿ ದಿನ ಮಾತ್ರ ಬಲಿಚಕ್ರವರ್ತಿಯೂ ಇಡೀ ಪ್ರಪಂಚಕ್ಕೆ ಒಡೆಯುನಾಗಿರುತ್ತಾನೆ. ಇದು ಪರಮಾತ್ಮ ತನ್ನ ವಾಮನ ರೂಪದಿಂದ ಬಲಿಗೆ ನೀಡಿರುವ ವರ. ಈ ದಿನ ಬಲಿಚಕ್ರವರ್ತಿಗೆ ಮೀಸಲಾದ ದಿನ. ಬಲಿಪಾಡ್ಯಮಿ ದಿನ ಕಾರ್ತೀಕ ಶುದ್ಧ ಪಾಡ್ಯದಂದು.

**ಬಲಿರಾಜ ನಮಸ್ತುಭ್ಯಂ ದೈತ್ಯದಾನವವಂದಿತ ।**
**ಇಂದ್ರಶತ್ರೋ ಅಮರಾವತೇ ವಿಷ್ಣುಸಾನ್ನಿಧ್ಯದೋ ಭವ ।**

## ಬಲಿಚಕ್ರವರ್ತಿ ಯಾರು ?

ಬಲಿಚಕ್ರವರ್ತಿ ಜನ್ಮತ: ದೈತ್ಯಕುಲದಲ್ಲಿದ್ದರೂ ಅವನು ಬಹಳ ಧರ್ಮಿಷ್ಟನಾಗಿದ್ದನು, ದಾನಶೂರನಾಗಿದ್ದನು. ಬಲಿಚಕ್ರವರ್ತಿಯು ಪ್ರಹ್ಲಾದರಾಜನ ಮರಿಮಗ, ವಿರೋಚನನ ಮಗ. ಹಿರಣ್ಯಕಶಿಪುವಿನ ದೈತ್ಯ ವಂಶದಲ್ಲಿ ಜನಿಸಿ ದೈತ್ಯಕುಲಕ್ಕೆ ಚಕ್ರವರ್ತಿಯಾಗಿದ್ದವನು.

## ಬಲಿಚಕ್ರವರ್ತಿಯು ಪಾತಾಳಲೋಕದಲ್ಲಿರಲು ಕಾರಣವೇನು ?

ಬಲಿಚಕ್ರವರ್ತಿಯು ಇಡೀ ಪ್ರಪಂಚವನ್ನೇ ತನ್ನ ಅಧೀನದಲ್ಲಿರಿಸಿಕೊಂಡಿದ್ದನು. ಎಲ್ಲ ಸಾಮ್ರಾಜ್ಯಗಳನ್ನೂ ಆಕ್ರಮಿಸಿ ತನ್ನ ವಶದಲ್ಲಿರಿಸಿಕೊಂಡಿದ್ದನು. ಇವನು ಇಂದ್ರನ ಪಟ್ಟಣವನ್ನೂ ಆಕ್ರಮಿಸಿ ಇಂದ್ರನನ್ನು ಹೊರಗೆ ಅಟ್ಟಿದ್ದನು. ಮತ್ತು ತಾನೇ ಇಂದ್ರಪದವಿಗೆ ಬರಲು ಉದ್ಯುಕ್ತನಾದನು. ಇಂದ್ರಪದವಿಗೆ ಬರಲು ಕನಿಷ್ಠ 100 ಅಶ್ವಮೇಧ ಯಾಗವನ್ನು ಮಾಡಬೇಕು. ಬಲಿಚಕ್ರವರ್ತಿಯೂ

ಸಹ 99 ಅಶ್ವಮೇಧ ಯಾಗವನ್ನು ಮುಗಿಸಿ, 100ನೇ ಯಾಗಕ್ಕೆ ಸಿದ್ಧತೆ ನಡೆಸಿದ್ದನು ತನ್ನ ದೈತ್ಯಗುರುಗಳಾದ ಶುಕ್ರಾಚಾರ್ಯರ ನೇತೃತ್ವದಲ್ಲಿ. ಈ ವಿಷಯುವನ್ನು ತಿಳಿದ ಇಂದ್ರ (ಪುರಂದರನಾಮಕ ಇಂದ್ರ) ಪರಮಾತ್ಮನಲ್ಲಿ ಮೊರೆಹೊಕ್ಕನು. ಇದೇ ವೇಳೆಗೆ ದೇವತೆಗಳ ಮಾತೆಯಾದ ಅದಿತಿಯು ಕಶ್ಯಪರನ್ನು ಕೋರಿದಳು. ತನ್ನ ಪುತ್ರನಾದ ಇಂದ್ರನನ್ನು ಸಂರಕ್ಷಿಸಿ ದೈತ್ಯರಿಂದ ರಕ್ಷಿಸಲು ಕೋರಿದಳು. ಆಗ ಕಶ್ಯಪ–ಅದಿತಿದೇವತೆಗಳು ಪರಮಾತ್ಮನಲ್ಲಿ ಮೊರೆಯಿಡಲು ಶ್ರೀಮನ್ನಾರಾಯಣನು "ವಾಮನ" ರೂಪದಿಂದ ಅವತರಿಸಿದನು ಅವರ ಗರ್ಭದಲ್ಲಿಯೇ. ಜನಿಸಿದ ಮಗನಿಗೆ ವಾಮನ ಎಂದು ನಾಮಕರಣ ಮಾಡಿ, ಅವನಿಗೆ ನಂತರ ಉಪನಯನವನ್ನೂ ಮಾಡಿದರು.

ಇದೇ ವೇಳೆಗೆ ತನ್ನ ಯಜ್ಞದಲ್ಲಿ ನಿರತನಾಗಿದ್ದ ಬಲಿಚಕ್ರವರ್ತಿಯು ಯಾಗ ಪರಿಸಮಾಪ್ತಿ ಹಂತಕ್ಕೆ ಬಂದಿದ್ದನು. ವಾಮನನು ತನ್ನ ಅವತಾರ ಕಾರ್ಯಕ್ಕಾಗಿ ತನ್ನ ಮರಿಮೊಗನಾದ (ಬಲಿಚಕ್ರವರ್ತಿ ದಿತಿ ಗರ್ಭದಲ್ಲಿ ಬಂದ ಹಿರಣ್ಯಕಶಿಪು ಪುತ್ರ–ಪ್ರಹ್ಲಾದನ ಮೊಮ್ಮಗ–ವಿರೋಚನ–ಅವನ ಮಗ ಬಲಿ ಚಕ್ರವರ್ತಿ) ಬಲಿಯುನ್ನು ನಿಗ್ರಹ ಮಾಡಲೋಸುಗ ಅವನ ಯಾಗಶಾಲೆಗೆ ಬಂದನು. ಬಂದ ಸುಂದರ ಮೂರುತಿಯಾದ ಬ್ರಹ್ಮಚಾರಿಯಾದ ವಾಮನನನ್ನು ಕಂಡ ಸಂತಸದಿಂದ ಬಲಿಯು ವಾಮನನ ಪಾದಪ್ರಕ್ಷಾಳನ ಮಾಡಿ, ನಿನಗೆ ಏನು ಬೇಕು – ನಗನಾಣ್ಯ ಬೇಕಾ, ಸುಂದರ ಹುಡುಗಿಯರನ್ನು ಕೊಟ್ಟು ಮದುವೆ ಮಾಡಬೇಕಾ, ಅರಮನೆ ಬೇಕಾ, ಆಸ್ತಿಗಳು ಬೇಕಾ ಎಂದು ಪ್ರಶ್ನಿಸಲು, ವಾಮನನು ನನಗಿದಾವುದೂ ಬೇಡ ಕೇವಲ ಅವನ ಮೂರು ಹೆಜ್ಜೆ ಭೂಮಿ ಕೊಟ್ಟರೆ ಸಾಕು ಎನ್ನಲು, ಬಲಿಯು ಹಾಸ್ಯಕ್ಕೆ ಹೀಗೆ ಹೇಳುತ್ತಿರುವನೆಂದು ಭಾವಿಸಿ, " ನಿನ್ನ ಮೂರು ಹೆಜ್ಜೆ ಎಂದರೆ ಏನು ಮಹಾ ಬರುತ್ತದೆ, ಅಷ್ಟು

ಕೊಟ್ಟರೆ ನನಗೇ ಅವಮಾನ, ಬೇರೆನ್ನಾದರೂ ಕೇಳು" ಎನ್ನಲು, ವಾಮನನು ನನಗೆ ಯಾವುದೂ ಬೇಡ, ಮೂರು ಹೆಜ್ಜೆ ಭೂಮಿ ಕೊಟ್ಟರೆ ಸಾಕು ಎಂದನು.

ಅಷ್ಟರಲ್ಲಿ ದೈತ್ಯಗುರುಗಳಾದ ಶುಕ್ರಾಚಾರ್ಯರು ಬಲಿಚಕ್ರವರ್ತಿಗೆ ಸೂಚಿಸಿದರು "ಈ ಬಾಲಕ ಸಾಮನ್ಯನಲ್ಲ, ದೇವತೆಗಳ ಪಕ್ಷಪಾತಿಯಾಗಿರುವ ಶ್ರೀಮನ್ನಾರಾಯಣನೇ ಈ ರೂಪದಿಂದ ಬಂದಿರುವನು. ಕೊಡಬೇಡ" ಎನ್ನಲು, ಬಲಿಯು ಅವರ ಮಾತನ್ನು ಪರಿಗಣಿಸದೇ ದಾನಕ್ಕೆ ಉದ್ಯುಕ್ತನಾಗಲು, ಶುಕ್ರಾಚಾರ್ಯರು "ನಿನ್ನ ಸಕಲ ಸಂಪತ್ತೆಲ್ಲ ನಶಿಸಿಹೋಗಲಿ" ಎಂದು ಶಪಿಸಿದರು.

ಬಲಿ ಚಕ್ರವರ್ತಿ ದಾನ ನೀಡುತ್ತಿದ್ದಂತೆಯೇ ಪುಟ್ಟ ವಯಸ್ಸಿನ ವಾಮನರೂಪಿ ಪರಮಾತ್ಮ ತನ್ನ ತ್ರಿವಿಕ್ರಮ ರೂಪವನ್ನು ಪಡೆದು ತನ್ನ ಮೊದಲ ಹೆಜ್ಜೆಯಲ್ಲೇ ಇಡೀ ವಿಶ್ವವನ್ನೇ ವ್ಯಾಪಿಸಿದನು. ಎರಡನೇ ಹೆಜ್ಜೆಯಲ್ಲಿ ಪಾತಾಳಾದಿ ಲೋಕಗಳನ್ನೆಲ್ಲಾ ವ್ಯಾಪಿಸಿ, ಮೂರನೇ ಹೆಜ್ಜೆಗೆ ಎಲ್ಲೂ ಜಾಗ ಸಿಗದಿದ್ದಾಗ, ಬಲಿಚಕ್ರವರ್ತಿಯು ತನ್ನ ತಲೆಯಮೇಲೆ ಇಡುವಂತೆ ಕೋರಿದನು. ಅದರಂತೆ ಪರಮಾತ್ಮನು ಬಲಿಯ ಶಿರದಲಿ ತನ್ನ ಪಾದವನ್ನಿಟ್ಟು ಅವನನ್ನು ಪಾತಾಳಲೋಕಕ್ಕೆ ತಳ್ಳಿ. ಅಲ್ಲಿ ಪಾತಾಳಲೋಕದಲ್ಲಿ ಚಕ್ರವರ್ತಿಯಾಗಿ ಮಾಡಿ, ಅವನ ಮನೆ ಕಾಯುತ್ತಾ ಕುಳಿತಿರುವನು ಒಂದು ರೂಪದಿಂದ. ಬಲಿಗೆ ಅನುಗ್ರಹ ಮಾಡಿ ಪ್ರತಿವರ್ಷ ಕಾರ್ತೀಕ ಶುದ್ಧ ಪಾಡ್ಯದಂದು ಭೂಲೋಕಕ್ಕೆ ಬರಲು ಅನುಗ್ರಹಿಸಿದನು. ಮತ್ತು ಮುಂದಿನ ಮನ್ವಂತರದಲ್ಲಿ ಅವನೇ ಇಂದ್ರನಾಗುವಂತೆ ಅನುಗ್ರಹಿಸಿದನು.

## ಬಲಿಪಾಡ್ಯಮಿ ಉತ್ತಮ ಮುಹೂರ್ತ –

ಸ್ವಯಂಸಿದ್ಧ ಮೂರುವರೆ ಮುಹೂರ್ತಗಳಲ್ಲಿ ಬಲಿಪಾಡ್ಯಮಿಯೂ ಒಂದು. ಉಳಿದವುಗಳೆಂದರೆ ವಿಜಯದಶಮಿ, ಯುಗಾದಿ, ಮತ್ತು ಅಕ್ಷಯತೃತೀಯ. ಆದ್ದರಿಂದ ಈ ಅರ್ಧ ಮುಹೂರ್ತವಿರುವ ಬಲಿಪಾಡ್ಯಮಿಯಂದು ನಾವು ಮಾಡಿದ ಶುಭಕೆಲಸವೆಲ್ಲವೂ ಉತ್ತಮ ಗತಿಗೆ ಸಾಧಕವಾಗುವುದು, ಹೆಚ್ಚಿನ ಫಲಕಾರಿ. ಪಂಚಾಂಗವನ್ನು ನೋಡದೇ ಕೂಡ ಈ ದಿನ ಮುಹೂರ್ತವನ್ನು ಇಟ್ಟುಕೊಳ್ಳಬಹುದು.

ಈದಿನ ಕೂಡ ನರಕಚತುರ್ದಶಿಯಂತೆ ಅಭ್ಯಂಜನ ಸ್ನಾನ ಮಾಡಿ, ದೇವಪೂಜೆ, ಸಂಧ್ಯಾವಂದನೆ, ಬ್ರಾಹ್ಮಣಸುವಾಸಿನಿಯರ ಪೂಜೆ–ಭೋಜನ ಮಾಡಿಸಿ, ದೀಪದಾನ ಮಾಡಬೇಕು.

ಸಂಗ್ರಹ – ನರಹರಿ ಸುಮಧ್ವ (9916904341)

For www.sumadhwaseva.com